# ನಗರ ಜೀವನದ ತವಕ ತಲ್ಲಣಗಳು

'ಭಗವಂತ ಪ್ರಕೃತಿಯನ್ನು ಸೃಷ್ಟಿಸಿದ; ಸೈತಾನ ನಗರವನ್ನು ಸೃಷ್ಟಿಸಿದ' ಎಂಬರ್ಥಬರುವ ಹೇಳಿಕೆಯೊಂದು ಇಂಗ್ಲಿಷ್‌ನಲ್ಲಿದೆ. ಆಧುನಿಕ ನಗರಗಳಲ್ಲಿ ಬದುಕುತ್ತಿರುವ ಜನಸಾಮಾನ್ಯರಿಗೆ ಈ ಮಾತಿನ ಸತ್ಯ ಅನುಭವಕ್ಕೆ ಬರುತ್ತದೆ. ಇಂದಿನ ಮಹಾನಗರಗಳನ್ನು ಕೀಟಾಹಾರಿ ಸಸ್ಯಗಳಿಗೆ ಹೋಲಿಸ ಬಹುದು. ಅಂಥ ಸಸ್ಯಗಳು ಬಣ್ಣ, ವಾಸನೆ– ಮುಂತಾದವುಗಳಿಂದ ಕೀಟಗಳನ್ನು ತಮ್ಮತ್ತ ಆಕರ್ಷಿಸಿ, ಅವನ್ನು ಒಳಕ್ಕೆಳೆದುಕೊಂಡು ಜೀರ್ಣಿಸಿಕೊಳ್ಳುತ್ತವೆ. ಇದೇ ರೀತಿ ಬೇರೆ ಬೇರೆ ಕಾರಣಗಳಿಂದ ಆಕರ್ಷಿತರಾಗಿ ನಗರಗಳಿಗೆ ಬರುವ ಸಾಮಾನ್ಯ ಜನ ಅವುಗಳ ಜೀರ್ಣಾಗ್ನಿಯಲ್ಲಿ ಸಿಲುಕಿ, ತಮ್ಮನ್ನು ತಾವು ಕಳೆದುಕೊಳ್ಳುತ್ತಾರೆ. ಯಾವುದೇ ಮಹಾನಗರವನ್ನು ತೆಗೆದುಕೊಳ್ಳಿ; ಅದರ ಒಳಕ್ಕೆ ಹೋಗುವ ಬಾಗಿಲು ಅಥವಾ ಪ್ರವೇಶದ್ವಾರ ಮಾತ್ರ ತೆರೆದಿರುತ್ತದೆ, ನಿರ್ಗಮಿಸುವ ದಾರಿ ಸದಾಕಾಲ ಮುಚ್ಚಿರುತ್ತದೆ. ಹೀಗಾಗಿ ಒಮ್ಮೆ ನಗರದ ಸೆಳೆತಕ್ಕೆ ಸಿಕ್ಕಿ, ಅದರೊಳಕ್ಕೆ ಬಂದಾತ, ತನಗೆ ಇಷ್ಟವಿರಲಿ, ಇಲ್ಲದಿರಲಿ, ಅಲ್ಲಿಯೇ ಉಳಿಯಬೇಕಾಗುತ್ತದೆ. ಆತನ ಪಾಡು ಸುಟ್ಟ ಕೊಬ್ಬರಿ ಚೂರಿನ ವಾಸನೆಯ ಆಕರ್ಷಣೆಗೆ ಒಳಗಾಗಿ ಬೋನಿನೊಳಕ್ಕೆ ನುಸುಳಿದ ಇಲಿಯ ಪಾಡಾಗುತ್ತದೆ.

ಈ ಕಾಲದ ನಗರಗಳು ಬಹುತೇಕ ಕೈಗಾರಿಕೀಕರಣದ ಕೂಸುಗಳು. ಕೈಗಾರಿಕೆ ಮತ್ತು ವಾಣಿಜ್ಯಗಳೆರಡು ಆಧುನಿಕ ನಗರಗಳ ಜೀವನಾಡಿಗಳು. ಯಾವುದೇ ಒಂದು ಪ್ರದೇಶದಲ್ಲಿ ಕಾರ್ಖಾನೆಯೊಂದು ಸ್ಥಾಪಿತವಾದೊಡನೆ ಅಲ್ಲಿ ಒಂದು ಪುಟ್ಟ ನಗರ ಹುಟ್ಟಿಕೊಳ್ಳುತ್ತದೆ. ಕೈಗಾರಿಕೆಯೊಂದಿಗೆ ಅದಕ್ಕೆ ಸಂಬಂಧಿಸಿದ ವ್ಯವಹಾರ ತಳಕು ಹಾಕಿಕೊಳ್ಳುತ್ತದೆ; ಹಲವಾರು ಉದ್ಯೋಗಗಳು ಸೃಷ್ಟಿಯಾಗುತ್ತವೆ; ಅವುಗಳನ್ನು ಹುಡುಕಿಕೊಂಡು ಜನ ಅಲ್ಲಿಗೆ ಎಲ್ಲೆಲ್ಲಿಂದಲೋ ಧಾವಿಸುತ್ತಾರೆ. ಕೆಲಮಂದಿ ಅದೃಷ್ಟಶಾಲಿಗಳಿಗೆ ಉದ್ಯೋಗ ದೊರಕಿದರೆ, ಉಳಿದವರು ಅಲ್ಲಿಯೇ ಉಳಿದು, ಬದುಕಿಗಾಗಿ ಬೇರೇನನ್ನೋ ಪ್ರಯತ್ನಿಸುತ್ತಾರೆ. ಒಟ್ಟಿನಲ್ಲಿ ಆ ಪ್ರದೇಶದಲ್ಲಿ ಜನಸಂಖ್ಯೆ ಹೆಚ್ಚುತ್ತಾ ಹೋಗುತ್ತದೆ. ಪರಿಣಾಮವಾಗಿ, ಒಂದು ಕಾಲದಲ್ಲಿ ಸಹನೀಯವೆನ್ನಿಸಿದ್ದ ಆ ಪ್ರದೇಶ ತನ್ನ ಮಿತಿಯನ್ನು ಮೀರಿ ಬೆಳೆದು ಅಸಹನೀಯ ಎನ್ನಿಸತೊಡಗುತ್ತದೆ.

ನಗರಾಭಿಮುಖವಾಗಿ ಧಾವಿಸುವ ಜನರಲ್ಲಿ ಎಲ್ಲರೂ ಉದ್ಯೋಗ ಆಕಾಂಕ್ಷಿಗಳಲ್ಲ. ಕೆಲವರು ಶ್ರಮ ಜೀವನಕ್ಕೆ ಬೆನ್ನು ಹಾಕಿ, ನಗರದಲ್ಲಿ ದೊರೆಯಬಹುದಾದ ಹಗುರ ಬದುಕಿಗೆ ಹಾತೊರೆದು ಬರುತ್ತಾರೆ; ಇನ್ನು ಕೆಲವರು ಬದುಕಿನಲ್ಲಿ ಸೋಲನ್ನು ಅನುಭವಿಸಿ, 'ಕೆಟ್ಟು ಪಟ್ಟಣ ಸೇರು' ಎಂಬ ತತ್ವಕ್ಕೆ ಶರಣಾಗಿ ಬರುತ್ತಾರೆ; ಕೆಲವರು ಉನ್ನತ ಶಿಕ್ಷಣದ ಉದ್ದೇಶದಿಂದಲೂ ಬರುತ್ತಾರೆ. ಒಂದಿಷ್ಟು ಮಂದಿ ನಗರ ಜೀವನದ ವಿಲಾಸ, ವೈಭವ, ಮನರಂಜನೆಗಳಿಂದ ಆಕರ್ಷಿತರಾಗುತ್ತಾರೆ. ವಯಸ್ಸಿನ ಕಾರಣದಿಂದಲೋ, ಬೇರೆ ತೊಂದರೆಗಳಿಂದಲೋ ಸ್ವತಃ ದುಡಿಯಲಾರದೆ ನಗರದಲ್ಲಿರುವ ಮಕ್ಕಳನ್ನು ಅವಲಂಬಿಸಿ ನಗರಕ್ಕೆ ಬರುವವರೂ ಕೆಲವರಿರುತ್ತಾರೆ. ಕಳ್ಳತನ, ದರೋಡೆ– ಮುಂತಾದ ಕುಕೃತ್ಯಗಳಿಗೆ ನಗರದಲ್ಲಿ ಧಾರಾಳ ಅವಕಾಶವಿದೆಯೆಂಬ ಕಾರಣಕ್ಕೆ ಅಲ್ಲಿಗೆ ಬರುವವರೂ ಇರುತ್ತಾರೆ.

ವಿವೇಚನಾರಹಿತವಾಗಿ ಬೊಜ್ಜು ಬೆಳೆಯಿಸಿಕೊಳ್ಳುತ್ತಿರುವ ಬೆಂಗಳೂರಿನಂಥ ನಗರಗಳ ಸಮಸ್ಯೆಗಳು ಒಂದೆರಡಲ್ಲ. ನಗರಗಳಲ್ಲಿ ಹೆಚ್ಚುತ್ತಿರುವ ಜನಸಂಖ್ಯೆಗೆ ಅನುಸಾರವಾಗಿ ವಸತಿ, ನೀರು, ವಿದ್ಯುತ್ ಇತ್ಯಾದಿ ಮೂಲಭೂತ ಅಗತ್ಯಗಳನ್ನು ಪೂರೈಸುವುದು ಅತ್ಯಂತ ಕಠಿಣವಾದ ಆಡಳಿತಾತ್ಮಕ ಸವಾಲು. ಜೊತೆಗೆ ಜನ ಸಮುದಾಯದ ಸಂಚಾರಕ್ಕೆ ಬೇಕಾಗುವ ಸಾರಿಗೆ ಸೌಕರ್ಯ, ಮಕ್ಕಳಿಗೆ ಶಿಕ್ಷಣ ಸೌಲಭ್ಯ, ನಗರವಾಸಿಗಳ ಆರೋಗ್ಯ, ಮಾನ, ಪ್ರಾಣ, ಆಸ್ತಿ ಮುಂತಾದವುಗಳ ರಕ್ಷಣೆ– ಜಟಿಲ ಸಮಸ್ಯೆಗಳೇ, ನಗರ ಜೀವನದ ಮತ್ತೊಂದು ಕರಾಳ ಮುಖವೆಂದರೆ, ಅಲ್ಲಿನ ಜನ ಅನುಭವಿಸಬೇಕಾಗುವ ಹಲವು ಬಗೆಯ ಮಾಲಿನ್ಯ ಪರಿಣಾಮಗಳು: ಜಲ ಮಾಲಿನ್ಯ, ವಾಯು ಮಾಲಿನ್ಯ, ಶಬ್ದ ಮಾಲಿನ್ಯ, ಪರಿಸರ ಮಾಲಿನ್ಯ– ಇತ್ಯಾದಿಗಳಿಂದಾಗಿ ಆರೋಗ್ಯವನ್ನು ಕಾಪಾಡಿಕೊಳ್ಳುವುದೇ ಇಂದಿನ ಭಾರತ ನಗರವಾಸಿಗಳ ಪಾಲಿಗೆ ಬಹುದೊಡ್ಡ ಸವಾಲು ಎನ್ನುವಂತಾಗಿದೆ. ಇವಿಷ್ಟೇ ಅಲ್ಲ; ಗ್ರಾಮಾಂತರ ಪ್ರದೇಶಗಳಲ್ಲಿ ಈಗಲೂ ಉಳಿದುಕೊಂಡಿರುವ ಸಹಾನುಭೂತಿ, ಸ್ಪಂದನ ಶೀಲತೆ ಮುಂತಾದ ಮಾನವೀಯ ಗುಣಗಳು ನಗರ ಜೀವನದಲ್ಲಿ ಅಷ್ಟಾಗಿ ಕಾಣಸಿಗುವುದಿಲ್ಲ. ಅಲ್ಲಿ ತಾನಾಯಿತು, ತನ್ನ ಲೋಕವಾಯಿತು ಎಂಬ ಆತ್ಮ ಕೇಂದ್ರಿತ ಪ್ರವೃತ್ತಿಯದೇ ಮೇಲುಗೈ ಎನ್ನಬಹುದು. ಹೀಗಾಗಿ ನಗರವಾಸಿಗಳಲ್ಲಿ ಕೆಲಮಂದಿಗಾದರೂ ಒಂದು ಬಗೆಯ ಅನಾಥ ಪ್ರಜ್ಞೆ ಕಾಡುತ್ತಿದ್ದರೆ ಅಚ್ಚರಿಯಿಲ್ಲ.

ನಗರ ಜೀವನ ವ್ಯಕ್ತಿಯಲ್ಲಿನ ಪ್ರತಿಭೆಯನ್ನು ಹೊರತರಬಹುದು; ಆತನ ಬುದ್ಧಿಶಕ್ತಿಯನ್ನು ಹರಿತಗೊಳಿಸಬಹುದು. ಆದರೆ ಆತನ ಮಾನವೀಯ ಗುಣಗಳನ್ನು ತುಳಿಯುತ್ತದೆ; ನೈತಿಕತೆ ಕುಸಿಯುವಂತೆ ಮಾಡುತ್ತದೆ. 'ನವೀಕರಣ'ವನ್ನು ಪ್ರೋತ್ಸಾಹಿಸುವ ನಗರ 'ಮಾನವೀಕರಣ'ವನ್ನು ಹೊಸಕಿ ಹಾಕುತ್ತದೆ!

■ **ವೈನತೇಯ**

## ಮಾತೇ ಮುತ್ತು

★ ಬೇರೆಯವರನ್ನು ಗೆಲ್ಲುವುದಕ್ಕಿಂತ ನಮ್ಮನ್ನು ನಾವೇ ಗೆಲ್ಲುವುದು ಸುಲಭವಲ್ಲ, ತನ್ನನ್ನು ತಾನೇ ಗೆಲ್ಲಬಲ್ಲವನು ಉತ್ತಮ ಸಾಧಕನಾಗಬಲ್ಲ.
–ಅನಕೃ

★ ದೇವರು ಸದಾ ಎಲ್ಲೆಡೆ ಇರುವುದು ಸಾಧ್ಯವಾಗುವುದಿಲ್ಲ. ಅದಕ್ಕೆಂದೇ ಅವನು ತಾಯಿಯನ್ನು ಸೃಷ್ಟಿಸಿದ್ದಾನೆ.
–ಎಡ್ವಿನ್ ಆರ್ನಾಲ್ಡ್

★ ಕೋಪ ಮಾಡಿಕೊಳ್ಳುವುದರ ಅರ್ಥ ಇನ್ನೊಬ್ಬರ ಕೊರತೆಗಳ ಬಗ್ಗೆ ಪ್ರತೀಕಾರ ತೆಗೆದುಕೊಂಡಂತೆ.
–ಪೋಪ್

★ ಫಲಭರಿತವಾದರೆ ವೃಕ್ಷ ಬಾಗುತ್ತದೆ. ಮಳೆಯ ಸಮಯದಲ್ಲಿ ಮೋಡ ಬಾಗುತ್ತದೆ. ಸಂಪತ್ತು ಸೇರಿದಾಗ ಸಜ್ಜನರು ನಮ್ರರಾಗುತ್ತಾರೆ. ಪರೋಪಕಾರಿಗಳು ಸದಾ ನಮ್ರ ಸ್ವಭಾವದವರಾಗಿರುತ್ತಾರೆ.
–ಕಾಳಿದಾಸ

★ ನಿಮಗೆ ಸಂತೋಷ, ಸಮಾಧಾನವಿದ್ದಾಗ ಬೇರೆಯವರ ಬಗ್ಗೆ ಒಳ್ಳೆಯ ಮಾತನಾಡುವಂತೆ; ಬೇಸರ, ಕಷ್ಟಗಳಿದ್ದಾಗಲೂ ಒಳ್ಳೆಯ ಮಾತಾಡುವುದು ಅಗತ್ಯ.
–ದ.ರಾ.ಬೇಂದ್ರೆ

★ ಸ್ವತಃ ತನ್ನನ್ನು ತಾನು ಗೆದ್ದವನನ್ನು ಪ್ರಪಂಚದ ಯಾವುದೇ ಶಕ್ತಿ ಸೋಲಿಸಲಾರದು.
–ಗೌತಮ ಬುದ್ಧ

★ ದುಃಖ ಭಾರಿ ಮಳೆಯಂತೆ ಕೆಸರು ಹರಡುತ್ತದೆ. ಅದರಿಂದ ಗುಲಾಬಿ ಹೂವು ಸಹ ಅರಳುತ್ತದೆ ಅಲ್ಲವೇ?
–ರವೀಂದ್ರನಾಥ ಠಾಕೂರ್

★ ನಿನ್ನ ಜ್ಞಾನದ ಮೇಲೆ ಜಡ್ಡುಗಟ್ಟಿರುವ ಆವರಣದ ಪರದೆಯನ್ನು ಹರಿಯಲು ದೇವರು ನಿನಗೆ ವೇದನೆಯನ್ನು ಕೊಟ್ಟಿದ್ದಾನೆ.
–ಖಲೀಲ್ ಗಿಬ್ರಾನ್

★ ಕರುಣೆಯನ್ನು ತೋರಿಸಿದವನು ಹಾಗೂ ಅದನ್ನು ಪಡೆದವನು– ಇಬ್ಬರೂ ಧನ್ಯರು.
–ಶೇಕ್ಸ್‌ಪಿಯರ್

★ ಬೇರೊಬ್ಬರ ಯಶಸ್ಸನ್ನು ಅಳಿಸಿ ತನ್ನ ಯಶಸ್ಸನ್ನು ಹೆಚ್ಚು ಮಾಡಿಕೊಳ್ಳಲು ಯಾರೇ ಪ್ರಯತ್ನಿಸಲಿ– ಅವನಿಗೆ ಕಳಂಕ ತಟ್ಟದೇ ಇರದು.
–ತುಲಸಿದಾಸ

★ ನಾವು ಮೂಢನಂಬಿಕೆಯನ್ನು ಆರಾಧಿಸಿ, ಬೇರೆಯವರ ಮೂಢನಂಬಿಕೆಗಳತ್ತ ಬೊಟ್ಟು ಮಾಡಿ ತೋರಿಸುತ್ತೇವೆ.
–ಅಜ್ಞಾತ

★ ಜೀವನ ಸುಂದರ ಪುಷ್ಪ ಮತ್ತು ಪ್ರೀತಿ ಅದರ ಮಧು.
–ವಿಕ್ಟರ್ ಹ್ಯೂಗೋ

★ ಸಜ್ಜನರ ಕೋಪ ನೀರಿನ ಮೇಲೆ ಗೆರೆ ಎಳೆದಂತೆ. ಕ್ಷಣದಲ್ಲೇ ಅದು ಮಾಯವಾಗುತ್ತದೆ.
–ರಾಮಕೃಷ್ಣ ಪರಮಹಂಸ